ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ನಾವು ಇದರ ಬಗ್ಗೆ overall decision ವೊಂದನ್ನು ಮಾಡಿದ್ದೇವೆ. ಆ decision ಪ್ರಕಾರ ಕಟ್ಟಿರುವ ಪಂಚಾಯಿತಿಗಳಿಗೆ re-appropriate ಮಾಡಿ ಅವರಿಗೆ ಬರಬೇಕಾದಂತಹ ಹಣವನ್ನು ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಮಗೆ ಮಾನ್ಯ ಸದಸ್ಯರ ಪ್ರಶ್ನೆ ಗೊತ್ತಾಯಿತೆಂದು ಭಾವಿಸುತ್ತೇನೆ. ನಮ್ಮ ಉಡುಪಿ ಶಾಸಕರ ಪ್ರಾರ್ಥನೆ ಏನೆಂದರೆ, ಅಲ್ಲಿ ಕೆಪಿಟಿಸಿಎಲ್‌ಗೆ ಪಂಚಾಯಿತಿಯಿಂದಲೇ ದುಡ್ಡು ಕಟ್ಟಿದ್ದಾರೆ, ಇವರು ಕಣ್ಣು ಮುಚ್ಚಿಕೊಂಡು ಬೇರೆ ಕಟ್ಟಿದಿರುವ ಗ್ರಾಮ ಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆಮಾಡುವಾಗ ಯಾವ ರೀತಿಯಾಗಿ ಮುರಿದುಕೊಂಡರೋ, ಅದೇ ರೀತಿಯಲ್ಲಿ ಅವರ ಪಂಚಾಯಿತಿಯ ಹಣವನ್ನೂ ಸಹ ಮುರಿದುಕೊಂಡಿದ್ದಾರೆ. ಅದನ್ನು ವಾಪಸ್ ಕೊಡಿ ಎಂದು ನಾವು ಹೋದ ಅಧಿವೇಶನದಲ್ಲೇ ಕೇಳಿದ್ದೆವು. ಪ್ರಾಮಾಣಿಕವಾಗಿ ಕಟ್ಟಿರುವವರಿಗೂ ಸಹ ನೀವು ಕಟ್ ಮಾಡುತ್ತಿರಾ? ಇದು ಒಂದು ಸರ್ಕಾರ ನಡೆಸುವ ರೀತಿಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : It is not proper ಇದು ಸರಿಯಲ್ಲ.

ಶ್ರೀ ಅರಗ ಜ್ಞಾನೇಂದ್ರ: ಆ ಚುನಾಯಿತ ಪ್ರತಿನಿಧಿಗಳ ಆಡಳಿತದ ಅವಧಿಯೇ ಮುಗಿದುಹೋಯಿತು. ಅವರು ಎಲೆಕ್ಷನ್‌ನಲ್ಲಿ ಸೋತರು.

ಅಧ್ಯಕ್ಷರು: ಮಾನ್ಯ ಸಚಿವರು ಈ ವಿಷಯದ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು.

ಡಾ: ಹೆಚ್.ಸಿ. ಮಹದೇವಪ್ಪ: re-appropriate ಮಾಡಿ ಆ ದುಡ್ಡನ್ನು ಅವರಿಗೆ ವಾಪಸ್ ಕೊಡುತ್ತೇವೆಂದು ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು: ಕೊಡಿಸುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದನ್ನು ಇಲ್ಲಿಗೇ ಬಿಡಿ.

159 (2094) **ಶ್ರೀ ಸಿಂಧೂರ ಜಿ. ರಾಜಶೇಖರ** (ಶಿಗ್ಗಾಂವ್) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಸವಣೂರ ಹಾಗೂ ಶಿಗ್ಗಾಂವ ತಾಲ್ಲೂಕುಗಳಲ್ಲಿ ನಿರ್ಮಲ ಗ್ರಾಮೀಣ ಯೋಜನೆಯಲ್ಲಿ ಕಳೆದಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಎರಡೂ ತಾಲ್ಲೂಕುಗಳಲ್ಲಿ ಎಷ್ಟು ಕೌಟುಂಬಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ.

ಇ) ಉಳಿದ ಕುಟುಂಬಗಳಿಗೆ ಶೌಚಾಲಯ ನಿರ್ಮಾಣ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಈ) ಶಿಗ್ಗಾಂವ್ ಹಾಗೂ ಸವಣೂರ ತಾಲ್ಲೂಕು ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಯಾವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ, ಅವುಗಳಿಗಾಗಿ ವೆಚ್ಚ ಮಾಡಿದ ಹಣದ ವೊತ್ತವೆಷ್ಟು?

ಉ) 2005–06ನೇ ಸಾಲಿನಲ್ಲಿ ಶಿಗ್ಗಾಂವ–ಸವಣೂರ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ಸ್ವಚ್ಛ ಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಿದೆ?

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ 450 ಹಾಗೂ ಸವಣೂರ ತಾಲ್ಲೂಕಿನಲ್ಲಿ 617 ಕೌಟುಂಬಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದು, ಈ ಸಲುವಾಗಿ ಒಟ್ಟು ರೂ.19,204 ಲಕ್ಷ ಸಹಾಯಾನುಧಾನ ನೀಡಲಾಗಿದೆ.

ಆ) ನಿರ್ಮಲ ಗ್ರಾಮ ಯೋಜನೆಯಲ್ಲದೆ, ಜಲ ನಿರ್ಮಲ ಯೋಜನೆ, ಸ್ವಚ್ಛ ಗ್ರಾಮ ಯೋಜನೆ ಮತ್ತು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯಡಿಯಲ್ಲಿ ಉಳಿದ ಕುಟುಂಬಗಳಿಗಾಗಿ ಶೌಚಾಲಯ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸ್ವಚ್ಛ ಗ್ರಾಮ ಯೋಜನೆಯಡಿ ಆಯ್ಕೆಯಾದ ಗ್ರಾಮಗಳು

ಶಿಗ್ಗಾಂವ ತಾಲ್ಲೂಕು	ಸವಣೂರ ತಾಲ್ಲೂಕ
1. ಅತ್ತಿಗೇರಿ	1. ಇಚ್ಚಂಗಿ
2. ಕುಂದೂರ	2. ಹತ್ತಿಮತ್ತೂರ
3. ಮಂತ್ರೋದಿ	3. ಹಿರೇಬಿಂಡಿಗೇರಿ
4. ಕಡಕೋಳ	4. ಹೋತನಹಳ್ಳಿ
5. ಶಿಶುವಿನಹಾಳ	
6. ಕಬನೂರ	
7. ಬಸವನಾಳ	
8. ಆಂದಲಗಿ	

ಈವರೆವಿಗೆ ಕ್ರಮವಾಗಿ ರೂ.126.27 ಲಕ್ಷ ಹಾಗೂ ರೂ.43.00 ಲಕ್ಷ ವೆಚ್ಚವಾಗಿದೆ.

ಉ) ಸಮುದಾಯ ವಂತಿಗೆ ಆಧಾರಿತ ಬೇಡಿಕೆ ಆಧರಿಸಿ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳ ಶಿಫಾರಸ್ಸಿನನ್ವಯ ನಿರ್ಧರಿಸಲಾಗುವುದು.

ಶ್ರೀ ಸಿಂಧೂರ ಜಿ. ರಾಜಶೇಖರ : ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಅಲ್ಲಿ ಎಲ್ಲಾ ಕೆಲಸಗಳೂ ಸಹ ಬಹಳ ಕಳಪೆ ಕಾಮಗಾರಿಗಳಾಗಿವೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 617 ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಕ್ಷೇತ್ರದಲ್ಲಿ ಅಷ್ಟೊಂದು ಶೌಚಾಲಯಗಳು ನಿರ್ಮಾಣವಾಗಿಲ್ಲ. ಆ ಶೌಚಾಲಯಗಳ ಪರಿಸ್ಥಿತಿ ಹೇಗಿದೆ ಎಂದರೆ, ಅವುಗಳೊಳಗಡೆ ಹೋಗುವುದಕ್ಕೇ ನನಗೆ ಹೇಸಿಗೆಯಾಗುತ್ತದೆ. ನಾನು ಒಳಗಡೆ ಹೋದರೆ ಆ ಶೌಚಾಲಯಗಳೆಲ್ಲಾ ಬಿದ್ದು ಹೋಗಿ ಬಿಡುತ್ತವೆ. ಶೌಚಾಲಯಗಳ ನಿರ್ಮಾಣದಲ್ಲಿ ಕಳಪೆ ಕಾಮಗಾರಿಗಳಾಗಿರುವ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಸತ್ಯನಾರಾಯಣ : ಸನ್ಮಾನ್ಯ ಅಧ್ಯಕ್ಷರೇ, ಶೌಚಾಲಯಗಳ ನಿರ್ಮಾಣದಲ್ಲಿ ಕಳಪೆ ಕಾಮಗಾರಿಗಳಾಗಿದೆ ಎಂದು ಮಾನ್ಯ ಶಾಸಕರು ಆರೋಪ ಮಾಡುತ್ತಿದ್ದಾರೆ, ಕಳಪೆ ಕಾಮಗಾರಿಗಳಾಗಿರುವುದು ಯಾವುದೂ ಸಹ ಸರ್ಕಾರದ ಗಮನಕ್ಕೆ ಬಂದಿಲ್ಲ, ನಾನು ನಮ್ಮ ಇಲಾಖಾಧಿಕಾರಿಗಳಿಗೆ ಹೇಳಿ, ಅಂತಹ ಕಳಪೆ ಕಾಮಗಾರಿಗಳು ಏನಾದರೂ ಇದ್ದರೆ, ಅಂತಹದ್ದು ಆಗಿದ್ದರೆ ಅಥವಾ ಅಂತಹವುಗಳ ಬಗ್ಗೆ ಶಾಸಕರು ವಿವರ ಕೊಟ್ಟರೆ, ಅವುಗಳನ್ನೂ ಸಹ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವಿಶೇಷದಲ್ಲಿ ಇನ್ನೊಂದು ವಿಚಾರವನ್ನು ಹೇಳುವುದಾದರೆ, awareness create ಮಾಡಲಿಕ್ಕೆ people participation ಮಾಡಿಸಿಕೊಂಡು individual ಆಗಿ ಈ ಶೌಚಾಲಯಗಳ ನಿರ್ಮಾಣವಾಗುತ್ತಿದೆ. ವೈಯಕ್ತಿಕವಾಗಿ ಆ ಗ್ರಾಮದ ಜನ ಅಥವಾ ಆ ಮನೆಯ ಜನರೇ ಇದರ beneficiaries ಆಗಿರುವುದರಿಂದ ಇದನ್ನು ಸದುಪಯೋಗಪಡಿಸಿಕೊಳ್ಳುವುದು ಅವರ awareness ಮೇಲೆ depend ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಶೌಚಾಲಯಗಳ ಕಳಪೆ ಕಾಮಗಾರಿಗಳ ಬಗ್ಗೆ ಸಮಗ್ರವಾಗಿ ತನಿಖೆ ಮಾಡುವುದಕ್ಕೆ ಮಾನ್ಯ ಸಚಿವರು ನ್ಯಾಯಾಂಗ ತನಿಖೆಯನ್ನೇನಾದರೂ ಏರ್ಪಡಿಸುತ್ತಾರೆಯೇ? ಇಡೀ ರಾಜ್ಯಾದ್ಯಂತ ಶೌಚಾಲಯಗಳ ನಿರ್ಮಾಣದಲ್ಲಿ ಯಾವ ರೀತಿಕಳಪೆ ಕಾಮಗಾರಿಗಳಾಗಿವೆ? ಅದಕ್ಕೆ ಯಾವ ರೀತಿ ಹಣ ಕೊಟ್ಟಿದ್ದೀರಿ? ಅದು ಸರಿಯಾಗಿ ಉಪಯೋಗವಾಗಿದೆಯೇ ಅಥವಾ ದುರುಪಯೋಗವಾಗಿದೆಯೇ? ಎಂಬ ಅಂಶಗಳನ್ನೆಲ್ಲಾ ಪರಿಶೀಲಿಸಲು ಸಮಗ್ರವಾದಂತಹ ತನಿಖೆಯೊಂದನ್ನು ಮಾಡುತ್ತೀರಾ? ತಾವು ಈ ರೀತಿ ಉತ್ತರ ಹೇಳಿದರೆ ಆಗುವುದಿಲ್ಲ,

ತಾವೇನಾದರೂ ಯಾವುದಾದರೂ ಹಳ್ಳಿಗಳಿಗೆ ಹೋಗಿ ನಿರ್ಮಾಣವಾದ ಶೌಚಾಲಯಗಳನ್ನು ನೋಡಿದ್ದೀರಾ? ಶೌಚಾಲಯ ಕಟ್ಟತಕ್ಕ ಸಾಮಾನ್ಯ ವ್ಯವಸ್ಥೆಯೂ ಸಹಿತ ಸರಿಯಿಲ್ಲವೆಂದರೆ ಹೇಗೆ? ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಶೌಚಾಲಯ ನಿರ್ಮಿಸಲು ನಾವು ಸಹಾಯಧನವನ್ನು ಕೊಡುತ್ತೇವೆ. People's participation ಮೇಲೆ ಇಲ್ಲಿ ಕೆಲಸವಾಗುತ್ತದೆ. ಕೆಲವು ಕಡೆ ಫಲಾನುಭವಿಗಳಿಗೆ ಅವರಿಗೇ ಅದರ ಅವಶ್ಯಕತೆ ಇಲ್ಲದೆ, ಸುಮ್ಮನೆ ಶಾಸ್ತ್ರಕ್ಕೆ ಅಧಿಕಾರಿಗಳು ಬಂದಾಗ ತೋರಿಸಿದಂತಹ ಪ್ರಸಂಗಗಳನ್ನು ನಾನೇ ನನ್ನ ಕ್ಷೇತ್ರದಲ್ಲಿ ನೋಡಿದ್ದೇನೆ. ನಮ್ಮ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳ ಮುಖಾಂತರ ಅಂತಹ ಕಡೆ ತನಿಖೆ ನಡೆಸಿ, ಮುಂದೆ ಆ ತರಹ ಆಗದಂತೆ ನೋಡಿಕೊಳ್ಳುವುದಕ್ಕೆ ಎಚ್ಚರ ವಹಿಸುತ್ತೇವೆ.

160 (2350) **ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) 2004-05ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಒಟ್ಟು ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು?

ಆ) ಈ ಮೊತ್ತದಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು (ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)?

ಡಾ: ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2004-05ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕ್ರಮವಾಗಿ ರೂ.435.13 ಕೋಟಿ ಮತ್ತು ರೂ.673.55 ಕೋಟಿ ಅನುದಾನ ಬಿಡುಗಡೆ ಮಾಡಿವೆ (ಒಟ್ಟು ರೂ.1108.68 ಕೋಟಿ).

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ. ಬಿಜಾಪುರ ಜಿಲ್ಲೆಯ ಕಾರ್ಯಕ್ರಮವಾರು, ತಾಲ್ಲೂಕುವಾರು ಕಾಮಗಾರಿಗಳ ಸಂಖ್ಯೆಯನ್ನು ಅನುಬಂಧ-2 ರಲ್ಲಿ ಕೊಡಲಾಗಿದೆ.